# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರ ಉತ್ತರ:

**************

## ಪ್ರಶ್ನೆ:

ಕೋಲಾರ ತಾಲ್ಲೂಕು, ವಕ್ಕಲೇ ಹೋಬಳಿ, ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23 ರಲ್ಲಿ ಹಾಗೂ ನರಸಾಪುರ ಹೋಬಳಿ, ಕುರ್ಕಿ ಗ್ರಾಮದ ಸರ್ವೆ ನಂ.141 ರಲ್ಲಿ ಕಲ್ಲು ಗಣಿಗಾರಿಕೆ ಮಾಡಲು ಬೆಂಗಳೂರಿನ ಕೆಲವು ಪ್ರಭಾವಿಗಳು ಪ್ರಯತ್ನಿಸುತ್ತಿದ್ದು, ಅಕ್ಕ ಪಕ್ಕದ ಜಮೀನುದಾರರ ಅನುಮತಿಯಿಲ್ಲದೆ, ಇಟಾಚಿ, ಜೆಸಿಬಿ, ಇತ್ಯಾದಿ ಬೃಹತ್ ಯಂತ್ರಗಳಿಂದ ಜಮೀನುಗಳಲ್ಲಿ ದೌರ್ಜನ್ಯವಾಗಿ ರಸ್ತೆ ನಿರ್ಮಿಸಲು ಮುಂದಾಗಿರುತ್ತಾರೆ. ಇವರುಗಳ ವಿರುದ್ಧ ಗ್ರಾಮಸ್ಥರು ಪೊಲೀಸರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಈ ಕಲ್ಲು ಗಣಿಗಾರಿಕೆಯು ರಾಷ್ಟ್ರೀಯ ಹೆದ್ದಾರಿ (ಎನ್.ಹೆಚ್-75) ಗೆ ಬಹಳ ಹತ್ತಿರದಲ್ಲಿದ್ದು ಹಾಗೂ ಕುರ್ಕಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 141 ರಲ್ಲಿ ಅರಣ್ಯ ಬೆಳಸುವ ಉದ್ದೇಶಕ್ಕೆ 246 ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಗೆ ವರ್ಗಾಹಿಸಲಾಗಿದೆ ಮತ್ತು ಸದರಿ ಜಾಗದ ಅಕ್ಕ ಪಕ್ಕದ ಜಮೀನುಗಳಲ್ಲಿ ವಾಣಿಜ್ಯ ಬೆಳೆ ಎಂದರೆ ಟಮೋಟ, ಆಲೂಗಡ್ಡೆ ಮತ್ತು ಇತರೆ ಬೆಳೆಗಳನ್ನು ಬೆಳೆಯುವ ಜಮೀನುಗಳಿದ್ದು, ಇವರೊಂದಿಗೆ ರೇಷ್ಮೆ ಸಾಕಾಣಿಕೆಯ ಮನೆಗಳು, ಕೋಳಿ ಫಾರಂ ಇತ್ಯಾದಿಗಳನ್ನು ಹೊಂದಿರುವ ರೈತರು ಇದ್ದರೂ ಸಹ ಇವರುಗಳ ಗಮನಕ್ಕೆ ಬಾರದೆ ಅಕ್ಕಪಕ್ಕದ ರೈತರ ಅನುಮತಿಯನ್ನು ಕೇಳದೆ ಮತ್ತು ಸ್ಥಳ ತನಿಖೆ ಮಾಡದೇ ಅವರುಗಳ ಸಹಿಗಳನ್ನು ಫೋರ್ಜರಿ ಮಾಡಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಅಕ್ರಮ ಗಣಿಗಾರಿಕೆ ಪರವಾನಗಿ ಪಡೆದುಕೊಂಡು ಈ ಸ್ಥಳದಲ್ಲಿ ಕ್ರಷರ್ (ಕಲ್ಲು ಪುಡಿ ಮಾಡುವ ಘಟಕ) ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ. ಇದಲ್ಲದೆ ಕೆಂದಟ್ಟಿ ಗೊಲ್ಲಹಳ್ಳಿಗೆ ಸೇರಿದ ಸರ್ವೆ ನಂ.23 ಕ್ಕೆ ಹೊಂದಿಕೊಂಡತ್ತಿರುವ ಕುರ್ಕಿ ಗ್ರಾಮಕ್ಕೆ ಸೇರಿದ ಸರ್ವೆ ನಂ.141 ರಲ್ಲಿ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಗೆ 5.00 ಎಕರೆ ಜಮೀನು ಸಹ ಮಂಜೂರಾಗಿರುತ್ತದೆ. ಇದರೊಂದಿಗೆ ಸಣ್ಣ ನೀರಾವರಿ ಇಲಾಖೆಗೆ ಸೇರಿದ 2 ಅಂತಸ್ತಿನ ಸರ್ಕಾರಿ ಕಟ್ಟಡ ಹಾಗೂ ವ್ಯಾಲಿ ಪಬ್ಲಿಕ್ ಖಾಸಗಿ ಶಾಲೆ ಸಹ ಇರುತ್ತದೆ.

ದಿನಾಂಕ: 20.05.2011 ರಂದು ಕೆಂದಟ್ಟಿ ಗೊಲ್ಲಹಳ್ಳಿ ಸರ್ವೆ ನಂ. 23 ರಲ್ಲಿರುವ ಕಲ್ಲು ಗಣಿಗಾರಿಕೆಗಾಗಿ ಅಕ್ರಮವಾಗಿ ನೀಡಿರುವ ಪರವಾನಗಿಯನ್ನು ರದ್ದುಪಡಿಸಿ, ದಿನಾಂಕ: 19.08.2021 ರಲ್ಲಿ ಮೆ|| ಗೋಂಡವನ ಸ್ಟೋನ್ ಸಂಸ್ಥೆಗೆ ವರ್ಗಾವಣೆಗೊಂಡಿರುವ ಪರವಾನಗಿಯನ್ನು ಸಹ ರದ್ದುಪಡಿಸಿ, ಇದರೊಂದಿಗೆ ಅಕ್ರಮ ಗಣಿಗಾರಿಕೆ ಮಂಜೂರಾತಿಗೆ ಸಹಕರಿಸಿದ ಎಲ್ಲಾ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಬೇಕಾಗಿರುವುದರಿಂದ ಈ ಮನವಿಯನ್ನು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

## ಉತ್ತರ:

ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23 ರಲ್ಲಿನ ಸರ್ಕಾರಿ ಗೋಮಾಳ ಜಮೀನಿನ 7-00 ಎಕರೆ ಪ್ರದೇಶದಲ್ಲಿ ಶ್ರೀಮತಿ ಎಂ. ಸುನಿತಾಕುಮಾರಿ ಎಂಬುವವರಿಗೆ ದಿನಾಂಕ 26.05.2011 ರಿಂದ ಐದು ವರ್ಷಗಳ ಅವಧಿಗೆ ಜಾರಿಗೆ ಬರುವಂತೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರಗಳು ಹಾಗೂ ರಾಜ್ಯ ಪರಿಸರ ಅಘಾತ ಅಂದಾಜೀಕರಣ ಪ್ರಾಧಿಕಾರಿಂದ ದಿನಾಂಕ 25.11.2019 ರಂದು ಪರಿಸರ ಅನುಮತಿ ಪತ್ರವನ್ನು ಪಡೆದು ಕಲ್ಲುಗಣಿ ಗುತ್ತಿಗೆ ಸಂಖ್ಯೆ 991ನ್ನು ಮಂಜೂರು ಮಾಡಲಾಗಿರುತ್ತದೆ.

ಕಲ್ಲುಗಣಿ ಗುತ್ತಿಗೆ ಸಂಖ್ಯೆ 991ನ್ನು ಕನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2020 ರ ನಿಯಮ 19-A ರಂತೆ ಮೆ|| ಗೊಂಡ್ವಾನ ಸ್ಟೋನ್ಸ್ ಎಲ್.ಎಲ್.ಪಿ ಎಂಬ ಸಂಸ್ಥೆಗೆ ದಿನಾಂಕ 19.08.2021 ರಂದು ವರ್ಗಾಯಿಸಲಾಗಿರುತ್ತದೆ.

...2

ಜಂಟಿ ನಿರ್ದೇಶಕರು, ದಕ್ಷಿಣ ವಲಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು ರವರು ದಿನಾಂಕ 31.10.2022 ರಂದು ಹಿರಿಯ ಭೂವಿಜ್ಞಾನಿ, ಕೋಲಾರ, ಕಲ್ಲುಗಣಿ ಗುತ್ತಿಗೆದಾರರು ಹಾಗೂ ಗ್ರಾಮಸ್ಥರುಗಳ ಸಮ್ಮುಖದಲ್ಲಿ ಕೋಲಾರ ತಾಲ್ಲೂಕು, ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ.23ರಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆ ಸಂಖ್ಯೆ 991 ಮತ್ತು ಸದರಿ ಗುತ್ತಿಗೆದಾರರಿಗೆ ಕಲ್ಲುಪುಡಿ ಘಟಕ ಸ್ಥಾಪನೆಗಾಗಿ ಸುರಕ್ಷತಾ ವಲಯ ಪಾಲನಾ ಪ್ರಮಾಣ ಪತ್ರ (ಫಾರಂ-ಬಿ1) ನೀಡಿರುವ ಪ್ರದೇಶದ ಜಂಟಿ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿರುತ್ತಾರೆ.

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 6(2) ರಂತೆ ಸ್ಫೋಟಕ ಬಳಸಿ ಗಣಿಗಾರಿಕೆ ನಡೆಸಲು ಕಲ್ಲುಗಣಿ ಗುತ್ತಿಗೆ ಪ್ರದೇಶವು ಸಾರ್ವಜನಿಕ ರಚನೆಗಳಿಂದ 200 ಮೀಟರ್ ಅಂತರ ಇರಬೇಕಾಗಿರುತ್ತದೆ. ಕಲ್ಲುಗಣಿ ಗುತ್ತಿಗೆಯ ಗಡಿಬಾಂದು "ಎ" ನಿಂದ ರಾಷ್ಟ್ರೀಯ ಹೆದ್ದಾರಿಗೆ 417 ಮೀ. ಕಾಫಿ-ಡೇ 390 ಮೀ. ಗಡಿಬಾಂದು "ಸಿ" ನಿಂದ ವ್ಯಾಲಿ ಪಬ್ಲಿಕ್ ಶಾಲೆಗೆ 852 ಮೀ. ಸಣ್ಣ ನೀರಾವರಿ ಇಲಾಖೆಯ ಕಟ್ಟಡಕ್ಕೆ 511 ಮೀ. ಕುರ್ಕಿ ಗ್ರಾಮವು 427 ಮೀ. ಅಂತರದಲ್ಲಿದ್ದು, ಪ್ರಸ್ತುತ ಗುತ್ತಿಗೆ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಕಂಡುಬಂದಿರುವುದಿಲ್ಲ.

ಕಲ್ಲುಗಣಿ ಗುತ್ತಿಗೆ ಸಂಖ್ಯೆ 991 ರ ಗುತ್ತಿಗೆದಾರರಿಗೆ ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23 ರಲ್ಲಿ 02-00 ಎಕರೆ ಪ್ರದೇಶದಲ್ಲಿ ಸ್ಟೋನ್ ಕ್ರಷರ್ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ, ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ ಕಾಯ್ದೆ, 2011 (ತಿದ್ದುಪಡಿ) ನಿಯಮಗಳು, 2013ರ ನಿಯಮ 6(3) ರಂತೆ ಕಂದಾಯ ಮತ್ತು ಅರಣ್ಯ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಜಂಟಿ ತಪಾಸಣೆ ಮಾಡಿ ಸುರಕ್ಷತಾ ವಲಯ ಘೋಷಣೆ ಮಾಡಲು ವಿಧಿಸುವ ಷರತ್ತುಗಳನ್ನು ಪೂರೈಸುವ ಬಗ್ಗೆ ವರದಿ ತಯಾರಿಸಿ ದಿನಾಂಕ 22.03.2021 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು, ಅಧಿಸೂಚನೆ ಹೊರಡಿಸಿ, ಸದರಿಯವರಿಗೆ ದಿನಾಂಕ 22.04.2022 ರಂದು ಕಲ್ಲುಪುಡಿ ಘಟಕ ಸ್ಥಾಪನೆಗಾಗಿ ಸುರಕ್ಷತಾ ವಲಯ ಪಾಲನ ಪ್ರಮಾಣ ಪತ್ರ (ಫಾರಂ-ಬಿ1) ನೀಡಲಾಗಿರುತ್ತದೆ.

ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಸದರಿಯವರು ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ CFE ಪಡೆದು ಸ್ಟೋನ್ ಕ್ರಷರ್ ಘಟಕ ಸ್ಥಾಪನೆ ಮಾಡಲು ಭೂಮಿಯನ್ನು ಅಭಿವೃದ್ಧಿ ಮಾಡುವ ಕಾರ್ಯವನ್ನು ಮಾಡುತ್ತಿದ್ದು, ಸದರಿ ಪ್ರದೇಶದಿಂದ ರಾಷ್ಟ್ರೀಯ/ರಾಜ್ಯ ಹೆದ್ದಾರಿ-213 ಮೀಟರ್, ಕುರ್ಕಿ ಗ್ರಾಮ-560ಮೀಟರ್, ದೇವಸ್ಥಾನ-560 ಮೀಟರ್, ಕಾಫಿ-ಡೇ -212 ಮೀಟರ್, ಸ್ವಾತಿ ಹೋಟೇಲ್-242 ಮೀಟರ್, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ ಕಛೇರಿ-393 ಮೀಟರ್ ವ್ಯಾಲಿ ಪಬ್ಲಿಕ್ ಶಾಲೆ-806 ಮೀಟರ್ ಅಂತರದಲ್ಲಿರುತ್ತವೆ.

ಸಣ್ಣ ನೀರಾವರಿ ಇಲಾಖೆಗೆ ಸೇರಿದ ಎರಡು ಅಂತಸ್ತಿನ ಕಟ್ಟಡವು ಸ್ಟೋನ್ ಕ್ರಷರ್ ಘಟಕ ಸ್ಥಾಪನೆ ಸಂಬಂಧ ಸುರಕ್ಷಿತ ಪಾಲನಾ ಪ್ರಮಾಣ ಪತ್ರ (ಫಾರಂ-ಬಿ1) ವಿತರಿಸಲು ಜಿಲ್ಲಾ ಸ್ಟೋನ್ ಕ್ರಷರ್ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸದಸ್ಯ ಅಧಿಕಾರಿಗಳ ತಂಡವು ದಿನಾಂಕ 07.12.2019 ರಂದು ನಡೆಸಿದ ಜಂಟಿ ಸ್ಥಳ ತನಿಖೆ ಸಂದರ್ಭದಲ್ಲಿ ಇರುವುದು ಕಂಡು ಬಂದಿರುವುದಿಲ್ಲ. ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ ಕಾಯ್ದೆ, 2012 ರಂತೆ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ 500 ಮೀಟರ್ ಅಂತರವನ್ನು ಕಾಯ್ದುಕೊಂಡಿದ್ದು, ಸದರಿ ಕಟ್ಟಡವು ಗ್ರಾಮ ಠಾಣಾ ವ್ಯಾಪ್ತಿಗೆ ಬರುವುದಿಲ್ಲ.

...3

ಕಲ್ಲುಪುಡಿ ಘಟಕ ಸ್ಥಾಪನೆಗಾಗಿ ಸುರಕ್ಷತಾ ವಲಯ ಪಾಲನ ಪ್ರಮಾಣ ಪತ್ರ (ಫಾರಂ-ಬಿ1) ನೀಡುವ ಸಂದರ್ಭದಲ್ಲಿ ಸದರಿ ಕಟ್ಟಡ ನಿರ್ಮಿಸಿರುವುದು ಕಂಡುಬಂದಿದ್ದು, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011ರ ಕಲಂ 6 ರಲ್ಲಿ ನಿರ್ದಿಷ್ಟಪಡಿಸಿರುವಂತೆ, ನೀರಾವರಿ ಇಲಾಖೆಯ ಕಟ್ಟಡದಿಂದ 500 ಮೀಟರ್ ಅಂತರವನ್ನು ಕಾಯ್ದಿರಿಸಿಕೊಂಡು ಕಲ್ಲುಪುಡಿ ಘಟಕದ ಪ್ರದೇಶದ ವಿಸ್ತೀರ್ಣವನ್ನು 02-00 ಎಕರೆಯಿಂದ 01-00 ಎಕರೆಗೆ ಕಡಿತಗೊಳಿಸಿ, ಸ್ಟೋನ್ ಕ್ರಷರ್ ಲೈಸೆನ್ಸ್ (ನಮೂನೆ-ಸಿ) ನೀಡಲು ಕ್ರಮ ವಹಿಸಬಹುದೆಂದು ವರದಿಸಿರುತ್ತಾರೆ. ಅದರಂತೆ, ಜಿಲ್ಲಾ ಸ್ಟೋನ್ ಕ್ರಷರ್ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ಕೆಂದಟ್ಟಿ ಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 23 ರಲ್ಲಿ ಕಲ್ಲುಗಣಿ ಗುತ್ತಿಗೆ ಪ್ರದೇಶ ಮತ್ತು ಸ್ಟೋನ್ ಕ್ರಷರ್ ಲೈಸೆನ್ಸ್ ನೀಡಲು ನಮೂನೆ-ಬಿ1 ವಿತರಿಸಿರುವ ಪ್ರದೇಶದಲ್ಲಿ ಯಾವುದೇ ಅಕ್ರಮ ಕಲ್ಲುಗಣಿಗಾರಿಕೆ ನಡೆಯುತ್ತಿರುವುದಿಲ್ಲ.

ಸಿಐ-ಎಂಎಂಎನ್/456/2022

Halappa

**(ಆಚಾರ್ ಹಾಲಪ್ಪ ಬಸಪ್ಪ)**
**ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ**
**ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ**
**ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು**